ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 19th July 1978/Ashada 28, 1900 S.E.

The House met in the Assembly Chamber, Vidhana Soudha, at Twelve of the Clock.

[MR. SPEAKER (SRI P. VENKATARAMANA) in the Chair].

STARRED QUESTIONS

(to which oral answers were given)

Funds of completion for canal works in Hemavathy and Kabini Project.

30. SRI M. V. RAJASHEKHARAN (Uttarahalli).—Will the Chief Minister be pleased to state.—

(*a*) whether adequate funds are not available to complete the canal works-Headworks in projects like Hemavathy, Kabini ;

(*b*) whether new projects are being taken up without ensuring if adequate funds are available or not ;

(*c*) the amount required for head works of Hemavathy and Kabini projects, the construction of which is under progress ;

(*d*) the amount actually spent so far for such headworks and the balance amount required to complete such works ;

(*e*) what is the Annual Programme for spending the balance funds ;

(*f*) the estimated cost of Channel works in each of such projects ;

(*g*) the amount spent so far on channel ?

SRI D. DEVARAJ URS (Chief Minister).—

(*a*) Adequate funds are being made available.

(*b*) No.

(*c*) and (*d*)—

Rs. in lakhs

Name of project (Head works)	Estimated Cost	amount spent	Balance amount
	Rs.	Rs.	Rs.
Hemavathy	3,133	2,763	370
Kabini	1,700	1,645	55

(*e*) the programme for completing the balance in respect of the headworks of Hemavathy project including submergence.

1977—78	...	Rs. 20 lakhs
1978—79	...	Rs. 301 lakhs
1979—80	...	Rs. 49 lakhs

As regards the Kabini Headworks, all works are completed except some rehabilitation works and beautification works.

(*f*) Rs. 3,900 lakhs in the case of Kabini and
Rs. 8,140.50 lakhs in the case of Hemavathi project

(*g*) Rs. 2,115 lakhs to end of February 1978, for Kabini canals.

Rs. 1,494 lakhs to end of February 1978, in the case of Hemavathy Project.

SRI M. V. RAJASEKHARAN.—With regard to channel work, I would like to know what happened to the Second Stage of the Channal Work of Hemavati Project to irrigate a portion of Tumkur District ?

† SRI DEVARAJ URS.—Sir, I think I have answered this question sometime back. Everything depends on the amount of money that we are able to provide. Secondly, it also depends upon the availability of water. Inspite of it, we have proposed the Second Stage as well wherein the waters could be made available to a larger area in portions of Tumkur district also.

SRI M. V. RAJASEKHARAN.—May I know what happened to the Kabini Second Stage project ?

SRI D. DEVARAJ URS.—Kabini Second Stage has been accepted and it is there. But the hon. member should understand that the money to be provided for channels either for this or that project runs into crores and crores, not a few crores but tens of crores of rupees. You will appreciate that it is not possible to do it in a few years. Some of the projects unfortunately, have not technically speaking, yet been given clearance by the Government of India.

† indicates that remarks or speeches have not been revised by the member Concerned.

SRI M. V. RAJASEKHARAN.—May I know the stage at which it stands ?

SRI D. DEVARAJ URS.—It is still theae. Inspite of it we are providing money from the non-plan side and we are continuning the work.

SRI M. V. RAJASEKHARAN.—Sometime back there was the system of giving work on piece work basis. Why was it discontinued ? I understand that there is lot of advantage in giving works on piece-work system and the work will also be completed early and you are not going to be tied with litigation. Is the Government still continuing the system or if it has been given up, what is the reason?

SRI D. DEVARAJ URS.—Neither of them is given up ; both are required. When big channels are to be dug and deep cuts are to be made, the local people will not be in a position to go beyond a certain depth. It is only the contractors who are used to such works. Wherever it is advantageous we do give work on piece-work system, and wherever it is not possible, of course it is given to contractors.

ಶ್ರೀ ಜೆ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹೇಮಾವತಿ ಸೆಕೆಂಡ್ ಸ್ಟೇಜ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅದು ತುಮಕೂರು ಡಿಸ್ಟ್ರಿಕ್ಟ್‌ಗೆ ಬರುತ್ತದೆ. ಈ ಸೆಕೆಂಡ್ ಸ್ಟೇಜ್‌ನಲ್ಲಿ ಯಾವ ತಾಲ್ಲೂಕಿಗೆ ಹೇಮಾವತಿ ನೀರು ಕೊಡಲಿಕ್ಕೆ ಸಾಧ್ಯ ?. ತುಮಕೂರು ಡಿಸ್ಟ್ರಿಕ್ಟ್ ಯಾವಾಗಲೂ ಬರಗಾಲದಿಂದ ಕೂಡಿರುತ್ತದೆ ಹೇಮಾವತಿ ಸೆಕೆಂಡ್ ಸ್ಟೇಜ್ ಎಷ್ಟು ವರ್ಷಗಳಲ್ಲಿ ಖಚಿತವಾಗಿ ಪ್ರಾರಂಭವಾಗುತ್ತದೆ ಎನ್ನುವುದನ್ನು ಹೇಳುತ್ತೀರಾ ?

SRI D. DEVARAJ URS.—Immediately, I am not able to give that opinion. I think in one of the answers in the course of this Budget Session I remember to have answered this very point. I do not mind giving that answer if I am given sufficient time. Because it did not arise out of this question, I have not been able to get the file.

ಶ್ರೀ ಜೆ. ಎಸ್. ಶಿವನಂಜಪ್ಪ.—ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಮುಕ್ಕಾಲು ಭಾಗ ಬರಗಾಲವಿರುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಅವರು ಅನೇಕ ಸಲ ಟೂರ್ ಮಾಡಿದ್ದಾರೆ. ಆದುದರಿಂದ ಹೇಮಾವತಿ ಸೆಕೆಂಡ್ ಸ್ಟೇಜನ್ನು ಹೇಗಾದರೂ ಮಾಡಿ ಆದಷ್ಟು ಜಾಗ್ರತೆ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಕಳವಳ, ಅವರ ಕುತೂಹಲ ನನಗೆ ಅರ್ಥವಾಗುತ್ತದೆ. ಒಂದು ಕಡೆ ದುಡ್ಡು ಕೊಡಿ ಎಂದರೆ ಆಗುವುದಿಲ್ಲ. ನಿಮ್ಮ ಮಂಡ್ಯ ಸ್ನೇಹಿತರನ್ನು ಕೇಳಿದರೆ ಅವರು ಮೇಲೆ ಬಿಳುತ್ತಾರೆ. ಹೆಚ್ಚಾಗಿ ಸಂಪಾದನೆ ಮಾಡುವವರನ್ನು ಕೊಡುವುದಕ್ಕೆ ಹೇಳಿ.

ತುಮಕೂರು, ತಿಪಟೂರು, ತುರುವೇಕೆರೆ, ಮತ್ತು ಗುಬ್ಬಿ, ಈ ಪ್ರದೇಶದಲ್ಲಿ ೩ ಲಕ್ಷ ಎಕರೆಗಳಷ್ಟು ನೀರಾವರಿಯಾಗುವುದಕ್ಕೆ ನಾವು ಹಾಕಿರುವ ಒಂದು ಪ್ರೋಗ್ರಾಮ್ ಇದು ಆಗಿರುತ್ತದೆ. ಪ್ಲಾನ್ ಎಸ್ಟಿಮೇಟ್ ಮಂಜೂರು ಮಾಡಿರುವ ಪ್ರಕಾರ ಸುಮಾರು ೨ ಲಕ್ಷದ ೯ ಸಾವಿರ ಚಿಲ್ಲರೆ ಎಕರೆಗಳಿಗೆ ನೀರನ್ನು ಕೊಡುವ ಸಾಧ್ಯವಿದೆ ಎಂದು ಅಂದಾಜು ಮಾಡಿದ್ದೇವೆ.

ಶ್ರೀ ಜಿ. ಮಾದೇಗೌಡ.—ಹೇಮಾವತಿ ಕಬಿನಿ ರಿಸರ್‌ವಾಯರ್ ಕೆಲಸ ಬಹುಶಃ ಪೂರ್ತಿಗೊಂಡು ಸುಮಾರು ೫—೬ ವರ್ಷಗಳ ಮೇಲಾಗಿರುತ್ತದೆ. ಹೇಮಾವತಿ ಪ್ರಾಜೆಕ್ಟ್ ಕೂಡ ಪೂರ್ಣ ಆಗಿದೆ ಎಂದು ತಿಳಿದುಬಂದಿರುತ್ತದೆ. ಆದರೆ ಕಾಲುವೆ ಮಾಡಿ ರೈತರಿಗೆ ನೀರನ್ನು ಒದಗಿಸಿಕೊಡತಕ್ಕಂಥ ಕೆಲಸ

ಮಾತ್ರ ಉಳಿದುಕೊಂಡಿರುತ್ತದೆ. ಈ ಪ್ರಾಜೆಕ್ಟ್‌ಗಳನ್ನು ಕಟ್ಟಿ ೬--೭ ವರ್ಷಗಳಾದರೂ ಈ ಪ್ರಾಜೆಕ್ಟ್ ಕೆಳಗಡೆ ಬರತಕ್ಕಂಥ ಪ್ರದೇಶಗಳನ್ನು ನೀರಾವರಿಗೆ ಒಳಪಡಿಸಲು ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತವೆ ಮತ್ತು ಇನ್ನು ಎಷ್ಟು ಹಣ ಬೇಕಾಗುತ್ತದೆ? ಮತ್ತು ಇದಕ್ಕೆ ಬೇಕಾಗುವ ಹಣವನ್ನು ಯಾವುದಾದರೂ ಒಂದು ರೀತಿಯಲ್ಲಿ ಒದಗಿಸಿಕೊಂಡು ಪ್ರಾಜೆಕ್ಟ್‌ನ ಉದ್ದೇಶ ಸಫಲವಾಗುವ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಮಾಡತ್ತೇನೆ.

SRI D. DEVARAJ URS.—In Kabani roughly the total acreage will be 1.24 lakhs acres and in Hemavathi 7 lakhs and odd acres if the entire first and second stage is completed. Most of it will be semy dry of course. This is the idea with which we have prepared the project for the second stage as well to see that the dry areas might be covered to the maximum extent. I want the hon. members to appreciate one factor: completing a dam is one thing and completing canal system is totally different. The canal system involves more expenditure, sometimes 1:4, 1:3. If I spend Rs.25 crores, nearly Rs.70 crores will be spent for the completion of the canal system; it involves deepcut, sometimes acquaducts, tunnels are to be constructed. Therefore the money portion involved is very heavy. Every year we are trying our best to provide more and more money for the Cauvery basin projects inspite of so many disadvantages we are facing. If only these projects had been given clearance by the Central Government, of course the clearance aspect is there since several years but inspite of it we are not able to get the clearance because they say unitl this Cauvery Water Dispute is settled, we cannot do it, that is their arguments; but we have been saying that it should be linked, this dialogue is continuing. But one thing has come to stay, I have made our position very clear before the Planning Commission whether you put it in this head or that head whether in the plan or non-plan, we cannot stop work so far as Cauvery Projects are concerned. I have tried every year to provide maximum amount possible under the circumstances. This year also, I think, we have provided Rs.10 crores for Hemavathi and Rs.6 and odd crores for Kabini. I wish I can provide more, but it is not possible. Unless these technial matters are cleared you will appreciate, I cannot venture to project the idea of getting some loan from the World Bank just as we did in the case of Upper Krishna and other projects.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಹೇಮಾವತಿ ಪ್ರಾಜೆಕ್ಟ್ ಪೂರ್ಣಗೊಂಡರೆ ಸುಮಾರು ೨ ಲಕ್ಷ ಎಕರೆಗಳಿಗೆ ಸಂಪೂರ್ಣವಾಗಿ ಡ್ರೈಕ್ರಾಪ್ ವಿರಿಯಾಕ್ಕೆ ನೀರನ್ನು ಒದಗಿಸುತ್ತೆವೆಂದು ಹೇಳಿದಿರಿ; ಚನ್ನರಾಯಪಟ್ಟಣಕ್ಕೆ ಹೇಮಾವತಿ ನೀರನ್ನು ಕೊಟ್ಟರೆ ಅಲ್ಲಿ ಸುಮಾರು ೧೪ ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲು ಸಾಧ್ಯವಾಗುತ್ತದೆ. ಮತ್ತು ಈಗಾಗಲೇ ಒಂದು ಸಕ್ಕರೆ ಕಾರ್ಖಾನೆಯ ಕೆಲಸವೂ ಕೂಡ ನಡೆಯುತ್ತಿದೆ. ಆದ್ದರಿಂದ ಎಷ್ಟು ಸಾವಿರ ಎಕರೆ ಕಬ್ಬನ್ನು ಬೆಳೆಯುವುದಕೆ ಹೇಮಾವತಿ ನೀರನ್ನು ಕೊಡುತ್ತೀರೆಂದು ಕೇಳುತ್ತೇನೆ?.

SRI D. DEVARAJ URS —How does he expect me to go into those details? I will say that water will be given for that much are that will grow enough cane for his factory.

ಶ್ರೀ ಜಿ. ಮಾದೇಗೌಡ.—ಕರ್ನಾಟಕ ರಾಜ್ಯದಲ್ಲಿ ಆದಷ್ಟು ಭಾಗವನ್ನು ನೀರಾವರಿ ಪ್ರದೇಶಗಳನ್ನಾಗಿ ಮಾಡಬೇಕು, ರೈತರಿಗೆ ನೀರನ್ನು ಒದಗಿಸಿಕೊಡಬೇಕು ಎಂದು ತಾವು ಏನು ಆಶಯವನ್ನು ಇಟ್ಟುಕೊಂಡಿರುತ್ತೀರಿ, ಇದು ನಿಜವಾಗಿಯೂ ಸ್ತುತ್ಯಾರ್ಹವಾಗಿರುತ್ತದೆ ಮತ್ತು ಈ ರೀತಿಯಾದ ಆಶಯವನ್ನು ಬೇರೆ ಯಾವ ಮುಖ್ಯ ಮಂತ್ರಿಗಳು ಇಟ್ಟುಕೊಂಡಿರಲಿಲ್ಲ. ಪ್ರಾಜೆಕ್ಟ್‌ಗಳ ಕೆಲಸ ಮುಗಿದು ೫—೬ ವರ್ಷಗಳಾದರೂ ಅದರ ಫಲ ರೈತರಿಗೆ ದೊರೆಯುತ್ತಿಲ್ಲ. ಅದಕ್ಕೆ ಹಣದ ಅಭಾವ ಮತ್ತು ಟಿಕ್ನಿಕಲ್ ಕ್ಲೀಯರೆನ್ಸ್ ಸಿಕ್ಕಿಲ್ಲವೆಂದು ಹೇಳ್ತಿದ್ದೀರಿ ಕೆರೆಕಟ್ಟೆಗಳಿಗೆ ಅರ್ಧಂಬರ್ಧ ದುಡ್ಡುವೆಚ್ಚ ಮಾಡಿ ರೈತರಿಗೆ ಯಾವ ಫಲವೂ ಸಿಕ್ಕದೆ ಇರುವುದರಿಂದ ಬಹುಬಾಗದ ಜನರಿಗೆ ಅನುಕೂಲವಾಗತಕ್ಕಂಥ ಪ್ರಾಜೆಕ್ಟ್ ಗಳನ್ನು ಪೂರ್ಣಗೊಳಿಸಿ ನೀರಿನ ಸೌಲಭ್ಯ ದೊರೆಯುವಂಥ ಪ್ರಯತ್ನ ಮಾಡುತ್ತೀರಾ?.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ತಾವು ಹೇಳುವುದು ಸರಿ. ತಮ್ಮ ಉದ್ದೇಶ ಬಹಳ ಒಳ್ಳೆಯ ಉದ್ದೇಶ ಈ ವಿಚಾರವನ್ನು ಎಲ್ಲರೂ ಜ್ಞಾಪಕಇಟ್ಟುಕೊಂಡರೆನನ್ನ ಕಲಸ ಸುಲಬವಾಗುತ ದೆ. ತಮ್ಮ ಕಡೆ ರಸ್ತೆ, ಪ್ರಾಜೆಕ್ಟ್ ಕೆಲಸ ಆಗಬೇಕೆಂದರೆ ಅದನ್ನು ನಿಲ್ಲಿಸುತ್ತೇವೆಂದು ಹೇಳಿದರೆ ತಾವು ಒಪ್ಪಿಕೊಳ್ಳಬಹುದು. ಆದರೆ ಬೇರೆಯವರು ಒಪ್ಪಿಕೊಳ್ಳವುದು ಸಾಧ್ಯವಿಲ್ಲ. ಅವರ ಅವಶ್ಯಕತೆ ತೀವ್ರವಾಗಿರುತ್ತದೆ, ಹಣವನ್ನು ಒದಗಿಸಿಕೊಡಬೇಕು, ನಿಲ್ಲಿಸಿದರೆ ಸಾಧ್ಯವಿಲ್ಲವೆಂದು ಒತ್ತಾಯ ಮಾಡುತ್ತಾರೆ, ಮೈನರ್ ಇರಿಗೇಷನ್‌ಗಾಗಿಯೇ ೧೩ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ, ನಾವೆಲ್ಲರೂ ಒಪ್ಪಿದರೂ ಹಾಗೆ ಮಾಡುವುದು ವ್ಯವಹಾರಿಕವೂ ಅಲ್ಲ. ಸ್ಕೂಲ್ ಬಿಲ್ಡಿಂಗ್ ರಿಪೇರಿಗಾಗಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. ಮನೆಗಳನ್ನು ಕಟ್ಟುವುದಕ್ಕಾಗಿ ೧೦ ಕೋಟಿ ರೂಪಾಯಿ ಗಳನ್ನು ಒದಗಿಸಿದ್ದೇವೆ. ಇದನ್ನೆಲ್ಲ ನಿಲ್ಲಿಸಿಬಿಡುತ್ತೇವೆಂದರೆ ಅದು ಹೇಗೆ ಸಾಧ್ಯ?.

We cannot push to the extreme. Then the other people will say, as I said yesterday, please remember that nearly 70 percent of the land is still under dry cultivation; there are lakhs of farmers who do not own more than 4 to 5 acres of land which are all dry, they have no other hope in their life. Supposing we give them a house or give them a school, they will be satisfied. Even if we build these projects to the disadvantage of these people, they will say what is the use of these projects.

Directly, persons who come under the achkat area gets benefit immediately. we must also look into the needs and difficulties of other people. Inspite of it we are trying to provide more and more funds every year by making adjustment . For nstaece, Kabini project. Neaarly Rs.32 crores more we have to spend in which event we are hopeful of completing all the channel works in 1983, and we will be able to provide water to the entiry achkat area contemplated in the project.

Again in hemavathi, we require some more crors, only for first stage. For the second still Rs. 50-60 crores more are required. ಶ್ರೀಮಾನ್ ಮಾದೇಗೌಡರು ಈಗ ಅರ್ಥ ಮಾಡಿಕೊಳ್ಳಬಹುದು ಅದನ್ನು ಹೇಗೆ ಮಾಡುವುದಕ್ಕೆ ಆಗುತ್ತದೆ ಎಂಬುದನ್ನು.

ಶ್ರೀ ಜಿ. ಮಾದೇಗೌಡ.—ಈಗ ಮದ್ರಾಸ್ ರಾಜ್ಯದಲ್ಲಿ ಶ್ರೀ ಕಾಮರಾಜರ ಕಾಲದಿಂದಲೂ ಸ್ಕೂಲ್ ರಿಪೇರಿ ಮಾಡತಕ್ಕಂಥ ಕೆಲಸಗಳನ್ನು, ರಸ್ತೆ ರಿಪೇರಿ ಮಾತಕ್ಕಂಥ ಕೆಲಸಗಳನ್ನು ಮತ್ತು ಮನೆ ಕಟ್ಟತಕ್ಕಂಥ ಕೆಲಸಗಳನ್ನು ನಿಲ್ಲಿಸಿ ಇವತ್ತು ಅಲ್ಲಿ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಯನ್ನು ಕೊಟ್ಟಿದಾರೆ. ಹಿಂದೆ ಅವರು ಕಾವೇರಿ ನೀರಿಗಾಗಿ ಪರದಾಡುತ್ತಿದ್ದರು. ಅವರು ಈ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹೆಚ್ಚಿನ ಅಧ್ಯತೆಯನ್ನು ಕೊಟ್ಟಿದ್ದರಿಂದ ಇವತ್ತಿನದಿವಸ ಹೆಚ್ಚಿನ ನೀರಾವರಿ

ಪ್ರದೇಶಗಳನ್ನು ಹೊಂದಿದ್ದಾರೆ. ತಾವು ಸಹ ಅವರ ಜೊತೆಯಲ್ಲಿ ಕಾವೇರಿ ನೀರಿಗಾಗಿ ಹೋರಾಟ ಮಾಡುತ್ತಿದ್ದಿರಿ. ತಾವು ನಮ್ಮ ರಾಜ್ಯಕ್ಕೆ ಹೆಚ್ಚಿನ ನೀರನ್ನು ಒದಗಿಸಬೇಕೆಂಬ ಆಶೆಯನ್ನು ಇಟ್ಟು ಕೊಂಡಿದ್ದೀರಿ. ಅದರಂತೆ ಹಿಂದಿನ ಸರ್ಕಾರದವರು ಏನೊಂದು ತಪ್ಪನ್ನು ಮಾಡಿದ್ದಾರೆ ಆ ತಪ್ಪನ್ನು ತಾವು ಮಾಡುವುದಕ್ಕೆ ಹೋಗಬಾರದೆಂಬುದೇ ನಮ್ಮ ಆಶೆ. ಆದ್ದರಿಂದ ತಾವು ರಸ್ತೆ ರಿಪೇರಿ, ಮನೆ ಕಟ್ಟಿಸುವುದು, ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟಿಸತಕ್ಕಂಥ ಕಾರ್ಯಕ್ರಮಗಳನ್ನು ನಿಲ್ಲಿಸಿ, ಈ ಇರಿಗೇಷನ್ ಪ್ರಾಜೆಕ್ಟ್ ಕೆಲಸಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ ತಾವು ಸ್ಕೂಲ್ ಕಟ್ಟಡ ಕಟ್ಟಿಸದೇ ಹೋದರೂ ಮಕ್ಕಳನ್ನು ಮರದ ಕೆಳಗೆ ಕುಳ್ಳಿರಿಸಿ ಪಾಠ ಹೇಳುತಕ್ಕಂಥ ಸಂಸ್ಥೆಗಳು ಇವೆ. ನಮಗೆ ಹೆಚ್ಚಿನ ನೀರನ್ನು ಒದಗಿಸಲು ತಾವು ಎನೇನು ಕೆಲಸಕಾರ್ಯಗಳನ್ನು ಮಾಡಬೇಕೋ ಅಷ್ಟನ್ನು ಮಾಡಬೇಕು. ಈ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಬೇರೆ ಕಾರ್ಯಕ್ರಮ ಗಳನ್ನು ತಾವು ಸಧ್ಯಕ್ಕೆ ನಿಲ್ಲಿಸಿ ಈ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ತಮ್ಮ ಅಭಿಪ್ರಾಯ ನನಗೆ ಗೊತ್ತಾಯಿತು. ಅದನ್ನು ಎಷ್ಟು ಸಾರಿ ಹೇಳಿದರೂ ಅಷ್ಟೆ. ತಾವು ತಮ್ಮ ಲೀಡರ್‌ಗೆ ಹೇಳಿ ಅಧಿವೇಶನದಲ್ಲೇ ಒಂದು ನಿರ್ಣಯವನ್ನು ತಂದ ಬಿಡಿ. ಬೇರೆಕಾರ್ಯಕ್ರಮಗಳನ್ನು ಯಾವಾಗ ನಿಲ್ಲಿಸಬೇಕು ಎನ್ನುವ ಬಗ್ಗೆ ಇಲ್ಲಿ ಚರ್ಚೆ ಮಾಡಿ ಬಿಟ್ಟು, ಅದನ್ನು ನಿಲ್ಲಿಸುವುದಕ್ಕೆ ತಾವು ಒಪ್ಪಿಕೊಂಡರೆ ಅದಕ್ಕೆ ನಾವು ಹಣವನ್ನು ಒದಗಿಸುತ್ತೇವೆ.

ಶ್ರೀ ಜಿ. ಮಾದೇಗೌಡ.—ಈ ಮನೆಯಲ್ಲಿ ನಿರ್ಣಯ ತಂದು ಚರ್ಚೆ ಮಾಡಿ ಎಲ್ಲರನ್ನೂ ಕೇಳಿ ಕೊಂಡ ನಾವು ಒಪ್ಪಿಕೊಂಡರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಾವು ಹೇಳುತ್ತಿದ್ದೀರಿ. ಇದಕ್ಕೇನೂ ನಿರ್ಣಯ ತರುವ ಅವಶ್ಯಕತೆ ಇಲ್ಲ. ಕೆಲವು ವಿಷಯಕ್ಕೆ ಮಾತ್ರ ನಿರ್ಣಯ ಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಈ ಬಗ್ಗೆ ನಿರ್ಣಯ ತನ್ನಿ, ನಮಗೆ ದುಡ್ಡು ಕೊಡುವುದಕ್ಕಾದರೂ ಅವಕಾಶ ಇರಲಿ.

ಶ್ರೀ ಜಿ. ಮಾದೇಗೌಡ.—ನಾವು ಬೆಳೆದ ಕಬ್ಬನ್ನೆಲ್ಲಾ ಮಾರಾಟ ಮಾಡಿ ತಮಗೆ ದುಡ್ಡು ಕೊಟ್ಟರೆ ಅದರಲ್ಲಿ ಪ್ರಾಜೆಕ್ಟ್ ಮಾಡುತ್ತೀರಿ. ?

ಶ್ರೀ ಡಿ. ದೇವರಾಜ ಅರಸ್.—ತಾವು ವಾಟರ್‌ರೇಟ್ ಕೊಡಿ.

ಶ್ರೀ ಜಿ. ಮಾದೇಗೌಡ.—ಮಾನ್ಯ ಮುಖ್ಯಮಂತ್ರಿಯವರು ಆದಷ್ಟು ಬೇಗ ಈ ಪ್ರಾಜೆಕ್ಟ್ ಗಳನ್ನೆಲ್ಲಾ ಪೂರ್ಣ ಮಾಡಿ ಜನರಿಗೆ ಅದರ ಫಲ ದೊರಕುವ ಹಾಗೆ ಮಾಡಿಕೊಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಲೀಡರ್‌ರವರು ಬಂದು ಒಂದು ನಿರ್ಣಯ ಮಂಡನೆ ಮಾಡಿ, ಇಲ್ಲಿ ಚರ್ಚೆ ಮಾಡಿ ಅದನ್ನು ಮಾಡಿಕೊಂಡು ಹೋಗಲಿ; ನನಗಂತೂ ಅದನ್ನು ಮಾಡುವುದ ಕ್ಕಾಗಲಿಲ್ಲ ಅದಕ್ಕೆ ಈ ಮನೆಯವರೆಲ್ಲಾ ಒಪ್ಪಲಿ ನಾವು ಮಾಡುತ್ತೇವೆ;

ಶ್ರೀ ಎಚ್. ಗಂಗಾಧರನ್.—ತಾವು ಉತ್ತರದಲ್ಲಿ ಕಬಿನಿ ಯೋಜನೆ ಬಗ್ಗೆ ೩,೯೦೦ ಲಕ್ಷ ರೂಪಾಯಿ ಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ; ಹಾಗೆಯೇ ೧೯೭೮ನೇ ಫೆಬ್ರುವರಿ ಅಂತ್ಯದವರೆಗೆ ಕಬಿನಿ ಕಾಲುವೆ ಗಾಗಿ ೨,೧೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ತಾವು ಹೇಳಿದ್ದೀರಿ. ಈ ಕಬಿನಿ ಯೋಜನೆಯ ಪ್ರಕಾರ ಎಷ್ಟು ಮೈಲಿ ದೂರದ ಕಾಲುವೆಯಾಗಿದೆ ? ಇನ್ನು ಎಷ್ಟು ಆಗಬೇಕು ? ಅದು ಪೂರ್ಣವಾಗಬೇಕಾದರೆ ಇನ್ನು ಎಷ್ಟು ಹಣವನ್ನು ಒದಗಿಸುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—ಬಹಶಃ ೫೦ ಕಿಲೋಮೀಟರ್‌ವರೆಗೆ ಆಗಿದೆ ಎಂದು ಹೇಳುತ್ತಾರೆ: ಈಗ ಆಗದೇ ಇರುವುದು ಇನ್ನೂ ೨ ಭಾಗ ಇದೆ.

ಶ್ರೀ ಎಚ್. ಗಂಗಾಧರನ್.—ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ?

ಶ್ರೀ ಡಿ. ದೇವರಾಜ ಅರಸ್.—೩೨ಕೋಟಿ ರೂಪಾಯಿಗಳೆಂದು ಆಗಲೇ ನಾನು ಹೇಳಿದನಲ್ಲಾ.

ಶ್ರೀ ಡಿ. ಟಿ. ಮಾಯಣ್ಣ.—ಹೇಮಾವತಿ ಪ್ರಾಜೆಕ್ಟ್‌ನ ಸೆಕೆಂಡ್ ಸ್ಟೇಜ್‌ನಲ್ಲಿ ಗುಬ್ಬಿ, ತಿಪಟೂರು, ಪಂತ್ತು ತುಮಕೂರು ಜಿಲ್ಲೆಯ ಇನ್ನೂ ಕೆಲವು ಭಾಗಗಳನ್ನು ತೆಗೆದುಕೊಳ್ಳುತ್ತೇವೆ ಎಂದು ತಾವು ಹೇಳಿದ್ದೀರಿ. ಹಾಗೆಯೇ ತಾವು ಮಂತ್ರಿಮಂಡಲದಲ್ಲಿ ತೀರ್ಮಾನ ಮಾಡಿ ತಿಂಮಂಕೂರಿನ ಕೆಲವು ಭಾಗಗಳನ್ನೂ ಮತ್ತು ಕುಣಿಗಲ್‌ನ ಕೆಲವು ಭಾಗಗಳನ್ನು ಅದರಲ್ಲಿ ಸೇರಿಸಿಕೊಳ್ಳುತ್ತೀರಾ ಸ್ವಾಮಿ?

ಶ್ರೀ ಡಿ. ದೇವರಾಜ ಅರಸ್.—ನೀರು ಎಷ್ಟು ಇದೆ, ಅದು ಎಷ್ಟೆಷ್ಟು ದೂರ ಎಳೆದುಕೊಂಡು ಹೋಗುತ್ತದೆಯೋ ಅಷ್ಟೆಲ್ಲವನ್ನೂ ನಾವು ಮಾಡುತ್ತೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ ತಾವು ಉತ್ತರದಲ್ಲಿ ಹಣದ ಅಭಾವದಿಂದ ಈ ಪ್ರಾಜೆಕ್ಟ್‌ಗಳು ನಿಧಾನವಾಗುತ್ತಿವೆ ಎಂದು ಹೇಳಿದ್ದೀರಿ. ತಾವು ಪವರ್ ಕಾರ್ಪೊರೇಷನ್ ಮತ್ತು ಇನ್ನೂ ಬೇರೆ ಬೇರೆ ಕಾರ್ಪೊರೇಷನ್‌ಗಳನ್ನು ಮಾಡಿದ್ದೀರಿ. ಅವುಗಳಿಂದ ಮತ್ತು ವರ್ಲ್ಡ್ ಬ್ಯಾಂಕ್‌ನಿಂದ ಹಣವನ್ನು ತೆಗೆದುಕೊಂಡು ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ನಾನು ಆಗಲೇ ಅದರ ಬಗ್ಗೆ ಉತ್ತರ ಕೊಡುವಾಗ ನೀವು ಇಲ್ಲೇ ಇದ್ದರಲ್ಲ;

SRI M. V. RAJASHEKHARAN.— I entire agree with the statement of the Chief Minister that founds are inadequate. I understand due to the payment on the basis of wrong classiffication under Channel works, a number of officers were suspended. What is the stage of that suspension whether any enquiry is held or completed ? Nearly 40 crores of rupees an involved in this.

ಶ್ರೀ ಡಿ. ದೇವರಾಜ್ ಅರಸ್.— ನಿಮಗೂ ಆ ವಿಚಾರ ಚೆನ್ನಾಗಿ ಗೊತ್ತಿದೆ. Whether it is Rs. 40 crores or 4 rupees, please put a separate question for it.

SRI M. V. RAJASHEKHARAN.— Sir, Nelamangala Taluk of Mandya District is chronically drought affected area. When are you going to provide water to that area ?

SRI D. DEVARAJ URS.— A protion will be covered in the first stage in Nelamangala area.

Special Nutrition Programme in the State

115. SMT. C. NAGAMMA KESHAVAMURTHY (Mayakonda).— Will the Minister of State for Women and Childern's Welfare be pleased to state.—

(*a*) the amount spent on Special Nutrition Programme in our State:

(*b*) the number of beneficiaries and which are the places where Special Nutrition Programme is carried out.

(*c*) how is this programme being executed and what is the staff employed for execution and supervision of this programme.

(*d*) whether there is any evaluation done regarding the effect of this programme ; if not why ?